**A**

**CCE RF/PF/NSR/NSPR**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ - 1**

**MARCH/APRIL 2024 EXAMINATION - 1**

# ಮಾದರಿ ಉತ್ತರಗಳು

# MODEL ANSWERS

**ಸಂಕೇತ ಸಂಖ್ಯೆ : 62-K** **CODE NO. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Fresh / Private Fresh / NSR / NSPR)**

**ದಿನಾಂಕ : 04. 04. 2024 ]** **[ ಗರಿಷ್ಠ ಅಂಕಗಳು : 80**

**Date : 04. 04. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **8 × 1 = 8** |
| 1. | ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಸ್ವರಗಳ ಸಂಖ್ಯೆ<br>(ಎ) ೦೫ (ಬಿ) ೦೬<br>(ಸಿ) ೦೭ (ಡಿ) ೦೯<br>***ಉತ್ತರ :*** (ಬಿ) ೦೬ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | 'ಧರ್ಮ' – ಈ ಪದದ ವಿರುದ್ಧಾರ್ಥಕ ಪದ<br>(ಎ) ಅಧರ್ಮ (ಬಿ) ಧರುಮ<br>(ಸಿ) ಧಮ್ಮ (ಡಿ) ಅವಿಧರ್ಮ<br>***ಉತ್ತರ :*** (ಎ) ಅಧರ್ಮ | |
| 3. | ಕವಿ ಗಾಂಧಿಯವರನ್ನು ಪವಾಡಪುರುಷರೆಂದು ಕರೆದರು. ಈ ವಾಕ್ಯದಲ್ಲಿ 'ಗಾಂಧಿಯವರನ್ನು' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ<br>(ಎ) ಪ್ರಥಮಾ ವಿಭಕ್ತಿ (ಬಿ) ತೃತೀಯಾ ವಿಭಕ್ತಿ<br>(ಸಿ) ಚತುರ್ಥೀ ವಿಭಕ್ತಿ (ಡಿ) ದ್ವಿತೀಯಾ ವಿಭಕ್ತಿ<br>***ಉತ್ತರ :*** (ಡಿ) ದ್ವಿತೀಯಾ ವಿಭಕ್ತಿ | |
| 4. | ಪ್ರಶ್ನೆಗಳನ್ನು ಬರೆಯುವ ಸಂದರ್ಭದಲ್ಲಿ ಪದ ಅಥವಾ ವಾಕ್ಯದ ಅಂತ್ಯದಲ್ಲಿ ಬಳಸುವ ಲೇಖನ ಚಿಹ್ನೆ<br>(ಎ) ಪ್ರಶ್ನಾರ್ಥಕ ಚಿಹ್ನೆ (ಬಿ) ಪೂರ್ಣವಿರಾಮ ಚಿಹ್ನೆ<br>(ಸಿ) ಭಾವಸೂಚಕ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ<br>***ಉತ್ತರ :*** (ಎ) ಪ್ರಶ್ನಾರ್ಥಕ ಚಿಹ್ನೆ | |
| 5. | 'ವರ್ಷ' – ಈ ಪದದ ತದ್ಭವ ರೂಪ<br>(ಎ) ವರ್ಷಾ (ಬಿ) ವರುಸಾ<br>(ಸಿ) ವರುಷ (ಡಿ) ವರ್ಸಾ<br>***ಉತ್ತರ :*** (ಸಿ) ವರುಷ | |
| 6. | ಕೆಳಗಿನವುಗಳಲ್ಲಿ ಗುಣ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ದೀಪಾಲಂಕಾರ (ಬಿ) ಸುರೇಂದ್ರ<br>(ಸಿ) ಏಕೈಕ (ಡಿ) ಗತ್ಯಂತರ<br>***ಉತ್ತರ :*** (ಬಿ) ಸುರೇಂದ್ರ | |
| 7. | 'ಹಕ್ಕಿ ಹಣ್ಣನ್ನು ತಿನ್ನುತ್ತದೆ' – ಈ ವಾಕ್ಯವು<br>(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ<br>(ಸಿ) ಮಿಶ್ರವಾಕ್ಯ (ಡಿ) ಅಲಂಕಾರಿಕ ವಾಕ್ಯ<br>***ಉತ್ತರ :*** (ಬಿ) ಸಾಮಾನ್ಯ ವಾಕ್ಯ | |
| 8. | ಪೊಲೀಸರು ಕಳ್ಳರನ್ನು ಬೆನ್ನಟ್ಟಿ ಹಿಡಿದರು. – ಈ ವಾಕ್ಯದಲ್ಲಿರುವ ಅನ್ಯದೇಶಿಯ ಪದ<br>(ಎ) ಪೊಲೀಸ (ಬಿ) ಕಳ್ಳರನ್ನು<br>(ಸಿ) ಬೆನ್ನಟ್ಟಿ (ಡಿ) ಹಿಡಿದರು<br>***ಉತ್ತರ :*** (ಎ) ಪೊಲೀಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 9. | ಭಾರತದಲ್ಲಿರುವ ನಾಣ್ಯ : ರೂಪಾಯಿ :: ಅಮೇರಿಕಾದಲ್ಲಿರುವ ನಾಣ್ಯ : .......... .<br>***ಉತ್ತರ :*** ಡಾಲರ್ | |
| 10. | ಶ್ರೀ ಜಿ.ಪಿ. ರಾಜರತ್ನಂ : ರತ್ನನ ಪದಗಳು :: ಅ.ನ. ಕೃಷ್ಣರಾಯ : ............ .<br>***ಉತ್ತರ :*** ಸಂಧ್ಯಾರಾಗ | |
| 11. | ಬಾಣ ಬಿರುಸು ಕುಂಡ ಹಣತೆ : ಬೆಳಕ ಸತ್ವ ಒಂದೆ :: ಕಂದ ವೃತ್ತ ತ್ರಿಪದಿ ವಚನ : ......................... .<br>***ಉತ್ತರ :*** ರಸ ಕವಿತ್ವ ಒಂದೆ | |
| 12. | ಕಣ್‌ದಿಟ್ಟಿ ಹರಿದತ್ತ : ಗ್ರಂಥಗಿರಿ ಪಂಕ್ತಿಗಳು :: ನಿಂತು ಬೆರಗೀಯುತಿವೆ : ....... .<br>***ಉತ್ತರ :*** ಪುಸ್ತಕಾಲಯದಲ್ಲಿ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **4 × 1 = 4** |
| 13. | ಶರೀಫರ ಪತ್ನಿಯ ಹೆಸರೇನು ?<br>***ಉತ್ತರ :***<br>ಶರೀಫರ ಪತ್ನಿಯ ಹೆಸರು ಫಾತಿಮಾ. | |
| 14. | ನವೀನ ಯುಗದ ಕೇತನ ಯಾವುದು ?<br>***ಉತ್ತರ :***<br>ಕ್ರಾಪುತಲೆಯು ನವೀನ ಯುಗದ ಕೇತನ. | |
| 15. | ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ವಿನಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 16. | ಎಂಥವನು ದೊರೆಯಾಗಬೇಕೆಂದು ಪುಲಿಗೆರೆ ಸೋಮನಾಥ ಹೇಳುತ್ತಾನೆ ?<br>***ಉತ್ತರ :***<br>ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ದೊರೆಯಾಗಬೇಕೆಂದು ಪುಲಿಗೆರೆ ಸೋಮನಾಥ ಹೇಳುತ್ತಾನೆ. | |
| **IV.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | **8 × 2 = 16** |
| 17. | ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದೇಕೆ ?<br>***ಉತ್ತರ :***<br>ಪೊಲೀಸ್‌ರ ಮನೆಯ ಹಾಸಿಗೆ ಅನೇಕ ದಿನಗಳಿಂದ ಉಪಯೋಗಿಸದೆ ಇರುವುದರಿಂದ ಧೂಳು ತುಂಬಿದೆ. ನೀವು ಏನೂ ತಿಳಿದುಕೊಳ್ಳದಿದ್ದರೆ, ಮಗ್ಗಲಲ್ಲಿ ನನ್ನ ವಶದಲ್ಲಿಯೇ ಒಂದು ಲಾಕಪ್ ಇದೆ. ಗಾಳಿ, ಬೆಳಕು, ಸ್ವಚ್ಛವಾದ ಹಾಸಿಗೆ, ವಾರಕ್ಕೆರಡು ಸಲ ಕ್ರಿಮಿನಾಶಕ ಸಾರಣೆ ಮಾಡುವುದರಿಂದ ಗೊರೂರರನ್ನು ಅಲ್ಲಿ ಮಲಗಿಸಲು ಯೋಚಿಸಿದರು. | |
| 18. | ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ತುಳಜಾಬಾಯಿ ಮಗನನ್ನು ಬಲಿಕೊಡುವ ಸಾಧ್ಯತೆಯ ಅರಿವಿದ್ದರೂ ಧೈರ್ಯ ತಂದುಕೊಂಡಳು. ಒಂದು ವರ್ಷದ ಹಿಂದೆ ಈ ಹೋರಾಟದಲ್ಲಿ ತನ್ನ ಪತಿ ಗತಿಸಿದ್ದರೂ ಲೆಕ್ಕಿಸದೆ ತನ್ನ ಮಗನನ್ನು ಆಶೀರ್ವದಿಸಿ ಮೋಹನಪುರದ ಹೋರಾಟಕ್ಕೆ ಶುಭಕೋರಿ ಕಳುಹಿಸಿ ಕೊಟ್ಟಿದ್ದಾಳೆ. "ಅಯ್ಯೋ ನನ್ನ ರಾಮಸಿ ನಿನ್ನ ಕೈಯಲ್ಲಿಯ ಧ್ವಜವನ್ನು ಕಸಿದುಕೊಂಡಿದ್ದಾರೆಯೇ ಇನ್ನೊಂದು ಧ್ವಜವನ್ನು ತಂದಿದ್ದೇನೆ. ತೆಗೆದುಕೊ ಎಂದು ನುಡಿದಳು." ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಬಲಕೊಟ್ಟಿರುವೆ. ನನ್ನ ಪ್ರಾಣವನ್ನು ತ್ಯಜಿಸಲು ಸಿದ್ಧಳಿದ್ದೇನೆ. ನಾನು ಈ ಧ್ವಜವನ್ನು ಕೆಳಗೆ ಇಡಲಾರೆನೆಂದು ಹೇಳುತ್ತ "ಭಾರತಮಾತೆಗೆ ಜಯವಾಗಲಿ" ಎಂದು ಧ್ವಜವನ್ನು ಎತ್ತಿ ಹಿಡಿದಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 19. | ಯುವ ಜನತೆ ಏನನ್ನು ಮೆಟ್ಟಿ ನಿಲ್ಲುತ್ತಾರೆ ? ಅವರ ಘೋಷಣವೇನು ?<br>***ಉತ್ತರ :***<br>ಎಲ್ಲೆಯ ಕಟ್ಟನ್ನೆಲ್ಲ ಮೆಟ್ಟಿ ಯುವ ಜನತೆ ನಿಲ್ಲಬೇಕು. ನಾವೆಲ್ಲರೂ ಒಂದೆ ಎಂಬುದು ಯುವಜನತೆಯ ಘೋಷಣೆಯಾಗಬೇಕು. | |
| 20. | ಅಂತಃಶುದ್ಧಿಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಬಸವಣ್ಣನವರು ತಿಳಿಸಿದ್ದಾರೆ ?<br>***ಉತ್ತರ :***<br>ಕಳ್ಳತನ, ಕೊಲೆ ಮಾಡುವುದು, ಸುಳ್ಳನಾಡುವುದು, ಸಿಟ್ಟಾಗುವುದು, ಅನ್ಯರನ್ನು ಅಸಹ್ಯ ಮಾಡುವುದು, ತನ್ನನ್ನು ವರ್ಣಿಸುವುದು, ಬೇರೆಯವರನ್ನು ಹಳಿಯುವುದು. ಈ ಎಲ್ಲಾ ಗುಣಗಳಿಂದ ದೂರವಿದ್ದರೆ ಅಂತಃಶುದ್ಧಿಯನ್ನು ಕಾಪಾಡಿಕೊಳ್ಳಬಹುದೆಂದು ಬಸವಣ್ಣನವರು ಹೇಳಿದ್ದಾರೆ. | |
| 21. | ಧರ್ಮಪದನನ್ನು ನೋಡಿ ವಿಶುವಿನಲ್ಲಿ ಮೂಡಿದ ಭಾವನೆಗಳೇನು ?<br>***ಉತ್ತರ :***<br>ತನಗೂ ಒಬ್ಬ ಮಗನಿದ್ದಾನಲ್ಲವೆ ? ಅವನು ಇವನಾಗಿರಬಾರದೇಕೆ ? ದೂರ ದೂರಿನಲ್ಲಿ ಆತನನ್ನು ಬಿಟ್ಟು ಬಂದಾಗ ಅವನು ಚಣ್ಣ ತೊಡುತ್ತಿದ್ದ. ಅವನ ವಯಸ್ಸು ಆಗ ಆರೋ–ಏಳೋ ಈಗವನಿಗೆ ಹದಿನೇಳರ ಪ್ರಾಯದ ಅಂಚು, ಇವನಿಗೂ ಅಷ್ಟೇ ಇರಬಹುದು ಎಂಬ ಭಾವನೆಗಳು ವಿಶುವಿನಲ್ಲಿ ಮೂಡಿದವು. | |
| 22. | ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕವಾದ ವಿಚಾರಗಳು ಯಾವುವು ?<br>***ಉತ್ತರ :***<br>ಕೊಡಗಿನ ಗೌರಮ್ಮನವರಿಗೆ ಕಾರಂತ, ಮಾಸ್ತಿ, ಬೇಂದ್ರೆಯವರ ಪರಿಚಯವಿತ್ತು. ಆರ್. ಕಲ್ಯಾಣಮ್ಮನವರ ಪರಿಚಯವಿತ್ತು. ಯಕ್ಷಗಾನ, ತಾಳಮದ್ದಲೆ, ಕುಮಾರವ್ಯಾಸ, ಉಮರ್ ಖಯಾಮನ ಕಾವ್ಯಗಳಲ್ಲಿ ಆಸಕ್ತಿ ಇತ್ತು. ಜಾನಪದದ ಬಗ್ಗೆ ಕುತೂಹಲವಿತ್ತು. ಸುತ್ತಮುತ್ತಲಿನ, ಬದುಕಿನಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೇಳಿ ಕಂಡ ಘಟನೆಗಳು ಅನುಭವ ಮಹಿಳಾ ಲೋಕದ ಕನಸುಗಳ, ಆದರ್ಶ ಚಿತ್ರಣ ಈ ಎಲ್ಲ ವಿಷಯಗಳು ಗೌರಮ್ಮನವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕವಾದ ವಿಚಾರಗಳಾಗಿವೆ. | |
| 23. | ಕೆಳದಿ ಚೆನ್ನಮ್ಮಳು ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಲು ಕಾರಣವಾದ ಸಂಗತಿಯನ್ನು ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿರಿ.<br>***ಉತ್ತರ :***<br>ಮೊಘಲರಿಗೆ ಅಂಜಿ ತಲೆ ಮರೆಸಿಕೊಂಡು ಓಡಿ ಬಂದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದಳು ಕೆಳದಿಯ ರಾಣಿ ಚೆನ್ನಮ್ಮ ಔರಂಗಜೇಬ್ ತನ್ನ ಮಗ ಅಜಮತಾರನ ಜೊತೆಗೆ ಭಾರಿ ಸೈನ್ಯ ಕಳುಹಿಸಿದನು. ಆಗ ಚೆನ್ನಮ್ಮ ಬೆಟ್ಟ, ಕಣಿವೆ, ಕಾಲುದಾರಿ, ಕಳ್ಳದಾರಿಯಲ್ಲಿ ಸೈನ್ಯವನ್ನು ನಿಲ್ಲಿಸಿ ಮೊಘಲ್ ಸೇನೆಗೆ ಅನ್ನ, ನೀರು ಸಿಗದಂತೆ ಮಾಡಿದಳು. ದಟ್ಟ ಕಾಡಿನ ಸಂದುಗೊಂದುಗಳಲ್ಲಿ ಚಲಿಸಲಾಗದೆ ಮಲೆನಾಡಿನ ಮಳೆಗೆ ಅಂಜಿ ಪ್ರಾಣ ಭೀತಿಯಿಂದ ಓಡುವಂತೆ ಮಾಡಿದಳು. ಈ ಕಾರಣದಿಂದಾಗಿ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದ್ದಾಳೆ. | |
| 24. | ಪುರಂದರದಾಸರು ಡಾಂಭಿಕ ಭಕ್ತನ ವೈರಾಗ್ಯಶಾಲಿ ಎಂದೆನಿಸುವ ಪೂಜೆಯನ್ನು ಹೇಗೆ ವರ್ಣಿಸಿದ್ದಾರೆ ?<br>***ಉತ್ತರ :***<br>ಡಾಂಭಿಕ ಭಕ್ತನು ಉದಯ ಕಾಲದಲ್ಲಿ ಎದ್ದು ಗಡಗಡ ನಡುಗುತ್ತ, ನದಿಯಲ್ಲಿ ಸ್ನಾನ ಮಾಡಿದೆನೆಂದು ಹಿಗ್ಗುತ್ತ, ಮನದಲ್ಲಿ ಮದ, ಮತ್ಸರ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ತುಂಬಿಟ್ಟುಕೊಂಡು ಬದಿಯಲ್ಲಿದ್ದವರಿಗೆ ಆಶ್ಚರ್ಯವನ್ನುಂಟು ಮಾಡುತ್ತಾನೆ. ಕಂಚುಗಾರನು ತನ್ನ ಅಂಗಡಿಯಲ್ಲಿ ವ್ಯಾಪಾರಕ್ಕಾಗಿ ಕಂಚು ಹಿತ್ತಾಳೆಯ ಪ್ರತಿಮೆಯನ್ನು ಜೋಡಿಸಿಡುವಂತೆ ಡಾಂಭಿಕ ಭಕ್ತನೂ ಸಹ ದೇವರ ಮನೆಯಲ್ಲಿ ವಿಗ್ರಹವನ್ನು ಜೋಡಿಸಿ ಅದು ಮಿಂಚಲು ಬಹು ಜ್ಯೋತಿಗಳನ್ನು ಹಚ್ಚಿ, ವಂಚನೆಯಿಂದಲೇ ಪೂಜೆ ಮಾಡುತ್ತಾನೆ. ಕೈಯಲ್ಲಿ ಜಪಮಣಿ, ಬಾಯಲ್ಲಿ ಮಂತ್ರ, ಮುಸುಕು ಹಾಕಿ ಪರಸತಿಯರನ್ನು ನೆನೆಯುತ್ತ ದೇವರನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಪೂಜಿಸುತ್ತಾನೆಂದು ಪುರಂದರದಾಸರು ಡಾಂಭಿಕ ಭಕ್ತನ ಪೂಜೆಯನ್ನು ವರ್ಣಿಸಿದ್ದಾನೆ. | |
| **V.** | **ಸಂದರ್ಭಸಹಿತ ವಿವರಣೆ:** | **2 × 3 = 6** |
| | ಪಠ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು-ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ."<br>***ಉತ್ತರ :***<br>ಈ ಮಾತನ್ನು 'ಎಸ್.ಆರ್. ರೋಹಿಡೇಕರ್' ಅವರ 'ರಾಮಸಿಂಗ್ ಚೌಕಾ' ಬರೆದ 'ಮೂರು ಏಕಾಂಕ ನಾಟಕಗಳು' ಕೃತಿಯಿಂದ ಆಯ್ದ 'ಧ್ವಜರಕ್ಷಣೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಪಾಠವನ್ನು ರಾಮಸಿಂಗ್‌ನು ಕುಲಕರ್ಣಿಯವರಿಗೆ ಹೇಳುತ್ತಾನೆ.<br>ಕುಲಕರ್ಣಿಯು ಸುಮ್ಮನೆ ಇಲ್ಲಿಂದ ಹೊರಟು ಹೋಗಿರಿ. ನನ್ನ ಸಿಟ್ಟು ನೆತ್ತಿಗೇರುತ್ತಿದೆ. ಎಂದನು ರಾಮಸಿಂಗ್‌ನು ಅದನ್ನು ಇಳಿಸುವ ಮಾಂತ್ರಿಕರು ನಮ್ಮಲ್ಲಿದ್ದಾರೆ. ಕುಲಕರ್ಣಿಯು ನನ್ನ ಕೈಯಲ್ಲಿ ಏನಿದೆ ನೋಡಿದೆಯಾ ? ಎನ್ನುತ್ತ ಪಿಸ್ತೂಲು ತೋರಿಸುವನು. ರಾಮ್‌ಸಿಂಗ್‌ನು ನನ್ನ ಕೈಯಲ್ಲಿ ಏನಿದೆ ನೋಡಿದೆಯಾ ? ಎನ್ನುತ ರಾಷ್ಟ್ರಧ್ವಜ ತೋರಿಸುತ್ತಾನೆ. ಆಗ ಕುಲಕರ್ಣಿಯು ಪಿಸ್ತೂಲು ತೋರಿಸಿ ಇದರ ಶಕ್ತಿಯ ಮುಂದೆ ನೀನು ನಿಲ್ಲಬಲ್ಲೆಯಾ ಎಂದನು. ರಾಮ್‌ಸಿಂಗ್‌ನು ಈ ಧ್ವಜದ ಶಕ್ತಿಯ ಮುಂದೆ ನೀವು ನಿಲ್ಲಬಲ್ಲಿರಾ ? ಎಂದನು. ಸುಮ್ಮನೆ ಕೆಳಗಿಡು ಅದನ್ನು ಕುಲಕರ್ಣಿ ಎಂದಾಗ, ರಾಮ್‌ಸಿಂಗ್‌ನು ಈ ಮೇಲಿನ ಮಾತನ್ನು ಹೇಳುತ್ತಾನೆ.<br>ರಾಮ್‌ಸಿಂಗ್‌ನ ನಿಜವಾದ ದೇಶಪ್ರೇಮ ಹೇಗಿದೆ ಎಂಬುದು ಈ ಸಂದರ್ಭದ ಸ್ವಾರಸ್ಯ. | |
| 26. | "ಪಾರ್ಥನೊಲು ತತ್ತರಿಸಿ ವಿಸ್ಮಿತನಾಗಿ."<br>***ಉತ್ತರ :***<br>ಈ ವಾಕ್ಯವನ್ನು ಸಿ.ಪಿ.ಕೆ.ಯವರು ಬರೆದ 'ಅನಂತ ಪೃಥ್ವಿ' ಎಂಬ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕವನಸಂಕಲನದಿಂದ ಆಯ್ದ 'ಗ್ರಂಥಾಲಯದಲ್ಲಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಸಿ.ಪಿ.ಕೆ.ಯವರು ಗ್ರಂಥಾಲಯದ ಕುರಿತು ಹೇಳುತ್ತಾರೆ.<br>ಗ್ರಂಥಾಲಯದಲ್ಲಿ ಹಿರಿಬಾಳುಗಳ ಮೇಳವಾಗಿದೆ. ಈ ಗ್ರಂಥಗಳು ಅಂಥ ಬಾಳುಗಳ ಅವಶೇಷಗಳಾಗಿವೆ. ಇದನ್ನು ಕಂಡು ಮೂಲವನ್ನು ಚಿತ್ರಿಸಲು ಯತ್ನಿಸುವೆ. ಆದರೆ ಕುರುಕ್ಷೇತ್ರ ಯುದ್ಧದಲ್ಲಿ ಶ್ರೀಕೃಷ್ಣನು ತನ್ನ ವಿಶ್ವರೂಪ ತೋರಿಸಿದಾಗ ಅರ್ಜುನನು ಅದನ್ನು ಕಂಡು ಭಯಗೊಂಡು ಸೋಜಿಗನಾದ ಸಂಗತಿಯನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| **VI.** | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | **4 × 3 = 12** |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಪೋರ್ಚುಗೀಸರು ಭಾರತೀಯರನ್ನು ಯಾವ ರೀತಿಯಲ್ಲಿ ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು ಎಂಬುದನ್ನು ವಿವರಿಸಿ.<br>***ಉತ್ತರ :***<br>ಪೋರ್ಚುಗೀಸರ ರಾಣಿ ಅಬ್ಬಕ್ಕ ದೇವಿಯು ತನ್ನ ಪ್ರೀತಿಯ ಪ್ರಜೆಗಳಾದ ರೈತರು ಕಷ್ಟಪಟ್ಟು ಬೆವರು ಹರಿಸಿ ಬೆಳೆದ ಏಲಕ್ಕಿ, ಅಕ್ಕಿ, ಮೆಣಸಿನಕಾಳು, ಮಸಾಲೆ ಪದಾರ್ಥಗಳನ್ನು ಮತ್ತು ನೇಕಾರರು ನೇಯ್ದ ಬಟ್ಟೆಯ ವ್ಯಾಪಾರಕ್ಕೆ ಬಂದ ಪೋರ್ಚುಗೀಸರು ಕಡಿಮೆ ಬೆಲೆಗೆ ಕೇಳಿದಾಗ ಅದನ್ನು ಕೊಡಲು ಅಬ್ಬಕ್ಕದೇವಿ ಒಪ್ಪಲಿಲ್ಲ ಇದನ್ನು ವಿರೋಧಿಸಿದಳು. ಅನ್ಯಾಯವಾಗಿ ಪೋರ್ಚುಗೀಸರು ಪಡೆಯುತ್ತಿದ್ದ ವಾರ್ಷಿಕ ಕಪ್ಪವನ್ನು ವಿರೋಧಿಸಿದಳು. ಅವರ ಆರ್ಥಿಕ ಶೋಷಣೆಗೆ ರಾಣಿ ಅಬ್ಬಕ್ಕ ದೇವಿಯು ತಲೆಬಾಗಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 28. | ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣಗಳೇನು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಬೀಚಿಯವರಿಗೆ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ಪುಸ್ತಕ ತುಂಬಾ ಮೆಚ್ಚುಗೆಯಾಯಿತು. ಈ ಕೃತಿಯ ಲೌಕಿಕವೂ, ಪಾರಮಾರ್ಥಿಕವೂ ಇದೆ. ಪಾರಮಾರ್ಥಿಕವು ವೇದಾಂತದ ವಿಷಯವಾಗಿದ್ದು, ಬೀಚಿಯವರಿಗೆ ವೇದಾಂತದ ನೆನಪು ಆಗುತ್ತಿದೆ. ವೇದಾಂತವು ಅನೇಕರಿಗೆ ಕಹಿ ಕುಡಿದಂತಾಗುತ್ತದೆ. ಅದರಂತೆ ಬೀಚಿಯವರಿಗೂ ಕೂಡಾ ಅದೇ ಭಾವನೆ. ಆದರೆ ಡಿ.ವಿ.ಜಿ.ಯವರು ಶುಷ್ಕ ವೇದಾಂತವನ್ನು ಶೃಂಗಾರ ಸ್ವಾರಸ್ಯವಾಗಿ ಮಾಡಿ ಕೊಟ್ಟಿದ್ದಾರೆ. ಉಪಮಾನಗಳಂತೂ ಚಿಕ್ಕ ಮಕ್ಕಳಿಗೆ ಅರ್ಥವಾಗುವಷ್ಟು ಸಾಮಾನ್ಯ ಭಾಷೆಯಲ್ಲಿ ಬರೆದಿದ್ದಾರೆ. ಈ ಎಲ್ಲ ಕಾರಣಗಳಿಂದ ಮಂಕುತಿಮ್ಮನ ಕಗ್ಗ ಕೃತಿಯು ಬೀಚಿಯವರಿಗೆ ತುಂಬಾ ಮೆಚ್ಚುಗೆಯಾಯಿತು. | |
| 29. | ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳನ್ನು ಹೇಗೆ ಮೆಚ್ಚಿಕೊಳ್ಳುವಿರಿ ? ವಿವರಿಸಿ.<br>***ಉತ್ತರ :***<br>ಬಸವಣ್ಣನವರು ಸ್ವರ್ಗ ನರಕಗಳ ಕಲ್ಪನೆಯನ್ನು ಸ್ಪಷ್ಟಪಡಿಸುತ್ತಾ. ಮನುಷ್ಯರು ಪರಿಶುದ್ಧ ಮನಸ್ಸಿನಿಂದ ದೈವಕೃಪೆಗೆ ಪಾತ್ರರಾಗಬೇಕೆಂದು ಹೇಳುತ್ತಾರೆ. ಮಾನವ ಕಳ್ಳತನ ಮಾಡಬಾರದು. ಕೊಲ್ಲಬಾರದು. ಸುಳ್ಳು ಹೇಳಬಾರದು. ಕೋಪ ಮಾಡಿಕೊಳ್ಳಬಾರದು. ಅಸಹ್ಯ ಪಡಬಾರದು, ತನ್ನನ್ನು ವರ್ಣಿಸಿಕೊಳ್ಳಬಾರದು, ಇದಿರ ಹಳಿಯಲು ಬಾರದು. ಈ ಗುಣಲಕ್ಷಣಗಳನ್ನು ಹೊಂದಿದ್ದರೆ. ಇದೇ ಅಂತರಂಗ, ಬಹುರಂಗ ಶುದ್ಧಿ ಹಾಗೂ ಕೂಡಲಸಂಗಮನನ್ನು ಒಲಿಸಿಕೊಳ್ಳಬಹುದು ಎಂದಿರುವರು.<br>ದೇವಲೋಕ, ಭೂಲೋಕ, ಎಲ್ಲಿಯೂ ಬೇರೆ ಬೇರೆ ಕಡೆಗೆ ಇಲ್ಲ, ಸತ್ಯ ಹೇಳಿದರೆ ದೇವಲೋಕ, ಸುಳ್ಳು ಹೇಳಿದರೆ ಮಾನವ ಲೋಕ, ಒಳ್ಳೆಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಡತೆ, ನುಡಿ ಇದ್ದರೆ ಅದೇ ಸ್ವರ್ಗ. ಅನಾಚಾರವಿದ್ದರೆ ಅದೇ ನರಕ ಎಂದಿದ್ದಾರೆ. ಇದಕ್ಕೆ ಕೂಡಲಸಂಗಮನೇ ಸಾಕ್ಷಿ ಎಂದಿದ್ದಾರೆ. ಈ ರೀತಿ ಸ್ವರ್ಗ ನರಕಗಳ ಕಲ್ಪನೆಯನ್ನು ಸ್ಪಷ್ಟಪಡಿಸುತ್ತ ಮನುಷ್ಯ ಪರಿಶುದ್ಧ ಮನಸ್ಸಿನಿಂದ ದೈವೀ ಕೃಪೆಗೆ ಪಾತ್ರರಾಗಬಹುದು ಎಂದಿದ್ದಾರೆ. | |
| 30. | ಉದರ ವೈರಾಗ್ಯದ ಸಾರಾಂಶವನ್ನು ಸಂಕ್ಷಿಪ್ತವಾಗಿ ಬರೆಯಿರಿ. | |
| | ***ಉತ್ತರ :*** | |
| | ಪುರಂದರದಾಸರು, ಡಾಂಭಿಕ ಭಕ್ತನು ಉದಯಕಾಲದಲ್ಲಿ ಎದ್ದು, ಗಡಗಡ ನಡುಗುತ್ತ, ನದಿಯಲ್ಲಿ ಸ್ನಾನ ಮಾಡಿ. ತನ್ನ ಮನದಲ್ಲಿ ಮದ, ಮತ್ಸರ, ಕ್ರೋಧ ಗುಣಗಳನ್ನು ಒಳಗೆ ತುಂಬಿಟ್ಟುಕೊಂಡು ನಟಿಸುತ್ತಾನೆ. ಕಂಚುಗಾರ. ಬಿಡಾರದ ಅಂದಕ್ಕಾಗಿ ಮೂರ್ತಿಗಳನ್ನು ಜೋಡಿಸಿ, ಮಿಂಚಲು ಹಲವು ಜ್ಯೋತಿಗಳನ್ನು ಹಚ್ಚಿ ಪೂಜೆ ಮಾಡುತ್ತಾನೆ. ಆದರೆ ವಂಚನೆ ಮಾಡುತ್ತ, ಮಾಡುವ ಪೂಜೆ ವ್ಯರ್ಥ ಎಂದು ಹೇಳಿದ್ದಾರೆ. ಬಯಲಿನಲ್ಲಿ ನಟಿಸುವ ಸ್ತ್ರೀ, ತನ್ನ ನಿಜಜೀವನದ ಎಲ್ಲವನ್ನು ಮರೆಮಾಚಿ ಹೇಗೆ ನಾಟಕದಲ್ಲಿ ನಟಿಸುವಳೋ, ಹಾಗೆ ಭಕ್ತ ತನ್ನ ಭಕ್ತಿಯನ್ನು ಮಹಾಭಕ್ತನಂತೆ ನಟಿಸುತ್ತಾನೆ. ಈ ಎಲ್ಲ ಕಾರಣಗಳಿಂದಾಗಿ ಪುರಂದರದಾಸರು ಡಾಂಭಿಕ ಭಕ್ತಿಯನ್ನು ನಾಟಕ ಸ್ತ್ರೀಗೆ ಹೋಲಿಸಿದ್ದಾರೆ. | |
| **VII.** | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಮ.ನ. ಮುಕ್ತಾಯಿ*:* | |
| | ***ಉತ್ತರ :*** | |
| | ಮ.ನ. ಮುಕ್ತಾಯಿ ಅವರು ಶಿವಮೊಗ್ಗ ಜಿಲ್ಲೆಯ ಅರತೊಳಲು ಗ್ರಾಮದಲ್ಲಿ ೧೯೬೧ ರಲ್ಲಿ ಜನಿಸಿದರು. ಇವರು ಸಣ್ಣ ಕತೆ, ಜೀವನ ಚರಿತ್ರೆ, ಲೇಖನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮತ್ತು ಪ್ರಬಂಧಗಳನ್ನು ಹಾಗೂ 'ಕೊಡಗಿನ ಗೌರಮ್ಮ' ಎಂಬ ಜೀವನ ಚರಿತ್ರೆಯನ್ನು ಬರೆದಿದ್ದಾರೆ. | |
| 32. | ಕೆ.ಎಸ್. ನಿಸಾರ್ ಅಹಮದ್ *:* | |
| | ***ಉತ್ತರ :*** | |
| | ಪ್ರೊ. ಕೆ.ಎಸ್. ನಿಸಾರ್ ಅಹಮದ್ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ೧೯೩೬ ರ ಫೆಬ್ರವರಿ ೫ ರಂದು ಜನಿಸಿದರು. ಇವರು 'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಸುಮುಹೂರ್ತ', 'ಸಂಜೆ ಐದರ ಮಳೆ', 'ಸ್ವಯಂ ಸೇವೆಯ ಗಿಳಿಗಳು', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಅನಾಮಿಕ ಆಂಗ್ಲರು', 'ನವೋಲ್ಲಾಸ' ಮುಂತಾದ ಕವನ ಸಂಕಲನಗಳನ್ನು ಬರೆದಿದ್ದಾರೆ. ಮಕ್ಕಳಿಗಾಗಿ 'ಹಕ್ಕಿಗಳು' ಎನ್ನುವ ಪುಸ್ತಕವನ್ನು ಬರೆದಿದ್ದಾರೆ. | |
| **VIII.** | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| 33. | "ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ." | |
| | **ಅಥವಾ** | |
| | "ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ." | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| **IX.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ವಿವರಿಸಿ. | |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಶರೀಫರು ಮತ್ತು ಗೋವಿಂದಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ಬರೆಯಿರಿ.<br>***ಉತ್ತರ :***<br>ಶರೀಫರ ತತ್ವಪದಗಳು ವೇದಶಾಸ್ತ್ರಗಳನ್ನು ಅರಿಯದವರು ಗುನುಗುಡುತ್ತಿರುತ್ತಾರೆ. ಮನೆ ಮನೆಗೂ ಅಲೆದಾಡಿ ಜೀವ ಹೊರೆಯುವ ದಾಸಯ್ಯಗಳು. ಭಿಕ್ಷುಕರು. ಇಂಥ ತತ್ವಪದಗಳನ್ನು ಹಾಡುತ್ತಾರೆ. ಶ್ರೀ ಸಾಮಾನ್ಯನು ತನ್ನ ಜೀವನವನ್ನು ಸಾಫಲ್ಯಗೊಳಿಸಿಕೊಳ್ಳುವ ರಹಸ್ಯಈ ಹಾಡುಗಳಲ್ಲಿವೆ. ಅಲ್ಲದೆ ಶರೀಫರ ಹಾಸ್ಯಗಳ ಗತಿ ಗತ್ತುಗಳು ಜನಮನವನ್ನು ಹಿಡಿಯುವಂಥವುಗಳಾಗಿವೆ. ಅಲ್ಲದೆ ಗುರು ಗೋವಿಂದಭಟ್ಟರು ಆದರ್ಶಗುರುಗಳಾಗಿ ಶರೀಫರಿಗೆ ದೊರಕಿದರು. ಅಸಮ ತೇಜೋರೂಪ ಕಿರಣದೊಳಗೆ ಬಂದು ದೊರಕಿದಾ ಗುರು ದೊರಕಿದಾ ಸದ್ಗುರು. ನಿನ್ನ ಮಾಯಕ್ಕೆ ಮರುಳಾದೆ ಗುರುಗೋವಿಂದ ಪರಮ ಗಾರುಡಿಗ ಎಂದು ಹಾಡಿದ್ದಾರೆ. ಸಮಾಜದ ತಪ್ಪು ನಡತೆಗಳನ್ನು ತೀಕ್ಷ್ಣವಾಗಿ ತಿದ್ದಿ ಮಾನವ ಕುಲದಿಂದ ವಿಚಾರಗಳು ಅವರ ಪದ್ಯದಲ್ಲಿ ಕಂಡುಬರುತ್ತವೆ. ಅವಸಾನಕ್ಕೆ ಕೆಲ ನಿಮಿಷಗಳ ಮುಂಚೆ ಅವರಿಗೆ ದಿವ್ಯ ಸ್ಫೂರ್ತಿಯುಂಟಾಗಿ "ಬಿಡತೀನಿ ದೇಹ ಬಿಡತೇನಿ, ಭೂಮಿಗೆ ಕೊಡತೇನೀ ದೇಹಾ ಬಿಡತೇನಿ" ಎಂದು ಹಾಡಿದರು. ಒಟ್ಟಾರೆ ಭಾವೈಕ್ಯತೆಯ ಸಂಗಮ ಇವನ ಹಾಡುಗಳಲ್ಲಿ ಕಾಣಬಹುದಾಗಿದೆ.<br>**ಅಥವಾ**<br>ಶರೀಫರು ಗುರು ಕೃಪೆಯನ್ನು ಪಡೆಯಲು ಮಠ ಮಂದಿರಗಳಿಗೆ ಹೋಗುತ್ತಿದ್ದರು. ಗುರುವಾಗಿ ತಡಕಾಡುತ್ತಿರುವ ಈ ಭಕ್ತಿ ಜೀವಕ್ಕೆ ದೇವರು ಫಲವನ್ನೀಯದಿರಲಿಲ್ಲ. ಗುರು ಗೋವಿಂದ ಭಟ್ಟರೆಂಬ ಆದರ್ಶ ಗುರುಗಳು ಶರೀಫರಿಗೆ ದೊರಕಿದರು. ಗುರು ಗೋವಿಂದರು ಕಳಸ ಗ್ರಾಮದವರು. ಜ್ಞಾನಿಗಳೂ, ವಿದ್ಯಾವಂತರೂ ನಗೆಮೊಗದ ಪ್ರಸಾದ ವಾಣಿಯ ದಿವ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವ್ಯಕ್ತಿಗಳಾಗಿದ್ದರು. ಕೈಯಲ್ಲಿ ತಾಮ್ರದ ತಂಬಿಗೆ ಹೆಗಲ ಮೇಲೆ ಪಂಚೆ, ನಡುವಿನಲ್ಲಿ ಲಂಗೋಟಿ ಇವರ ವೇಷಭೂಷಣಗಳಾಗಿದ್ದವು. ಗುರು ಗೋವಿಂದರು ಶಕ್ತಿಯ ಉಪಾಸಕರಾಗಿದ್ದರು. ಮಾನವಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು. ಜಾತಿ ಮತಗಳ ಭೇದವೆಂದರೆ ಇವರಿಗಾಗದು. ಮುಸಲ್ಮಾನ ಶಿಷ್ಯನಿಗೆ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು. ಗುರುಶಿಷ್ಯರಿಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು. ಗುರು ಶಿಷ್ಯರು ವಿಶೇಷವಾಗಿ ಕೂಡಿಕೊಂಡು ಇರುತ್ತಿದ್ದರು. ಗುರು, ಶಿಷ್ಯರಿಬ್ಬರಿಗೂ ಅಂದಿನ ಸಮಾಜ ಬಹಿಷ್ಕಾರ ಹಾಕಿತ್ತು. ಪಾಳು ದೇವಾಲಯ ಮತ್ತು ಸಾರ್ವಜನಿಕ ಗುಡಿ ಗುಂಡಾರಗಳೇ ಅವರ ವಾಸ ಸ್ಥಾನಗಳಾಗಿದ್ದವು. ಹೀಗೆ ಶರೀಫರ ಗುರು ಗೋವಿಂದ ಭಟ್ಟರ ನಡುವೆ ತುಂಬಾ ಅನ್ಯೋನ್ಯತೆ ಇತ್ತು. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 35. | ಅಪ್ಪರಿಲ್ಲದೆ ........................................................<br>......................................................................<br>........................................................ ಕರುಣೇಸೊ<br>**ಅಥವಾ**<br>ಮೂಡಮೋಡ ....................................................<br>......................................................................<br>........................................................ ಮುಗಿಲಲ್ಲಿ<br>***ಉತ್ತರ :***<br>ಅಪ್ಪರಿಲ್ಲದೆ ಸೊಪ್ಪಾದೊ ಈ ಭೂಮಿ<br>ಸಪ್ಪೆ ದಂಟಾದೊ ದನಕರ – ಮಳೆರಾಯ<br>ಅಪ್ಪ ನೀ ಬಂದು ಕರುಣೇಸೊ<br>**ಅಥವಾ**<br>ಮೂಡಮೋಡ ನೋಡೋ ಮೋಡದ ಚಂದನೋಡೋ<br>ಗೋಡೆಗೆ ಕಪ್ಪ ಬಳಿದ್ಹಂಗೆ – ಮಳೆರಾಯ<br>ಬೋರಾಡು ತಾವೆ ಮುಗಿಲಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** **(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **1 × 4 = 4** |
| 36. | ಬಿ.ವಿ. ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯವರು. ತಂದೆ ನಾರಣಪ್ಪಯ್ಯ. ತಾಯಿ ಲಕ್ಷ್ಮಮ್ಮ. ಹಿರಿಯ ಮಗನಾಗಿ ೧೯೨೯ ರಲ್ಲಿ ಕಾರಂತರು ಹುಟ್ಟಿದರು. ಆರ್ಥಿಕವಾಗಿ ಬಡವರಾದರೂ ಸಾಂಸ್ಕೃತಿಕವಾಗಿ ಬಡತನ ಕಾಡಲಿಲ್ಲ. ತಾಯಿಯಿಂದ ಸುತ್ತಮುತ್ತಲ ಪರಿಸರದಿಂದ ಇವರು ಬಹುದೊಡ್ಡ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪಡೆದರು. ಸಂಗೀತ, ನಾಟಕ, ಓದು ಇವರ ಬಾಲ್ಯದ ಆಸಕ್ತಿಯ ವಿಷಯಗಳು.<br><br>ಎಂಟನೆಯ ತರಗತಿಯನ್ನು ಓದಿ ಮುಗಿಸುವ ಹೊತ್ತಿಗೆ ಶಾಲೆ ಬಿಡಬೇಕಾಗಿ ಬಂತು. ಊರು ಬಿಟ್ಟು ಮೈಸೂರು ತಲುಪಿ ಗುಬ್ಬಿ ಕಂಪನಿ ಸೇರಿ ತಮ್ಮ ಓದು, ಸಂಗೀತದ ಆಸಕ್ತಿಯನ್ನು ಹೆಚ್ಚಿಸಿಕೊಂಡರು. ನಾಟಕ ಕಲಿಸಲು ಬರುತ್ತಿದ್ದ ಬೆಳ್ಳಾವೆ ನರಹರಿಶಾಸ್ತ್ರೀ, ಬಿ. ಪುಟ್ಟಸ್ವಾಮಯ್ಯ ಅವರಲ್ಲಿ ಶಿಷ್ಯವೃತ್ತಿ ಮಾಡಿದರು. ಒಟ್ಟು ೧೦೪ ನಾಟಕಗಳನ್ನು ಕಾರಂತರು ನಿರ್ದೇಶಿಸಿದ್ದಾರೆ. ಇವರ ನಿರ್ದೇಶನದ ವಂಶವೃಕ್ಷ, ತಬ್ಬಲಿ ನೀನಾದೆ ಮಗನೇ, ಚೋಮನದುಡಿ ಚಿತ್ರಗಳು ರಾಷ್ಟ್ರಪ್ರಶಸ್ತಿ ಪಡೆದಿವೆ. ಇವರು ಶ್ರೇಷ್ಠ ನಟ, ನಿರ್ದೇಶಕ, ನಾಟಕಕಾರ, ಸಂಗೀತಗಾರರಾಗಿದ್ದರಿಂದ ಇವರನ್ನು ಬಹುಮುಖ ಪ್ರತಿಭೆಯ ರಂಗಸಂಪನ್ನರೆಂದು ಕರೆಯುತ್ತಾರೆ.<br>ಎ) ಬಿ.ವಿ. ಕಾರಂತರ ತಂದೆತಾಯಿಯ ಹೆಸರನ್ನು ತಿಳಿಸಿ.<br>***ಉತ್ತರ :*** ಬಿ.ವಿ. ಕಾರಂತರ ತಂದೆಯ ಹೆಸರು ನಾರಣಪ್ಪಯ್ಯ ತಾಯಿಯ ಹೆಸರು ಲಕ್ಷ್ಮಮ್ಮ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಿ) ಬಿ.ವಿ. ಕಾರಂತರ ಬಾಲ್ಯದ ಆಸಕ್ತಿಯ ವಿಷಯಗಳಾವುವು ? | |
| | **ಉತ್ತರ :** ಬಿ.ವಿ. ಕಾರಂತರ ಬಾಲ್ಯದ ಆಸಕ್ತಿಯ ವಿಷಯಗಳು ಸಂಗೀತ, ನಾಟಕ ಓದು. | |
| | ಸಿ) ಮೈಸೂರು ತಲುಪಿದ ಕಾರಂತರು ಸಂಗೀತದ ಆಸಕ್ತಿಯನ್ನು ಹೇಗೆ ಹೆಚ್ಚಿಸಿಕೊಂಡರು ? | |
| | **ಉತ್ತರ :** ಊರು ಬಿಟ್ಟು ಮೈಸೂರು ತಲುಪಿ ಗುಬ್ಬಿ ಕಂಪನಿ ಸೇರಿ, ಕಾರಂತರು ತಮ್ಮ ಓದು, ಸಂಗೀತದ ಆಸಕ್ತಿಯನ್ನು ಹೆಚ್ಚಿಸಿಕೊಂಡರು. | |
| | ಡಿ) ಕಾರಂತರು ನಿರ್ದೇಶಿಸಿದ ಯಾವ ಯಾವ ಚಿತ್ರಗಳು ರಾಷ್ಟ್ರಪ್ರಶಸ್ತಿ ಪಡೆದಿವೆ ? | |
| | **ಉತ್ತರ :** ವಂಶವೃಕ್ಷ, ತಬ್ಬಲಿ ನೀನಾದೆ ಮಗನೆ, ಚೋಮನದುಡಿ, ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿ ದೊರೆತಿವೆ. | |
| **XII.** | **ಪ್ರಬಂಧ ಬರವಣಿಗೆ :** | **1 × 4 = 4** |
| 37. | ಸಂಪರ್ಕ ಮಾಧ್ಯಮ – ಉಪಯೋಗ, ದುಷ್ಪರಿಣಾಮ. | |
| | **ಅಥವಾ** | |
| | ವರದಕ್ಷಿಣೆ ಪಿಡುಗು | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **XIII.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 38. | ನಿಮ್ಮನ್ನು ಧಾರವಾಡದ ನಿವಾಸಿ 'ಶ್ರೀನಿಧಿ' ಎಂದು ಭಾವಿಸಿಕೊಂಡು, ಮೈಸೂರಿನಲ್ಲಿರುವ ಅಣ್ಣನವರಿಗೆ ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ ಒಂದು ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಕೋಲಾರದ ನಿವಾಸಿ 'ಶ್ರೇಯಸ್' ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಕೆಟ್ಟು ಹೋಗಿರುವ ಒಳ ಚರಂಡಿ ವ್ಯವಸ್ಥೆಯನ್ನು ದುರಸ್ಥಿ ಮಾಡಿಸುವಂತೆ ಕೋರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |